

ಎಂದುಬಿಡುತ್ತೇವೆ. 'ನಿನ್ನ ಎಲ್ಲ ಸ್ನೇಹಿತರನ್ನೂ ಮನೆಯೊಳಗೆ ಕರ್ಕೊಂಡು ಬರ್ಬೇಡಾ...' ಎಂದು ಹೇಳುವ ಪರಿಪಾಠ ಇನ್ನೂ ನಿಂತಿಲ್ಲ. ಅಥವಾ, 'ಯಾಕೆ ಹೀಗೆ ಒರಟೊರಟಾಗಿ ಮಾತಾಡ್ತೀ... ನೀನು ಹೆಣ್ಣುಹುಡುಗಿ ಅಂತ ನೆನಪಿರ್ಲಿ ನಿಂಗೆ' ಎಂದು ಮಗಳನ್ನು ತರಾಟೆಗೆ ತೆಗೆದುಕೊಳ್ಳುವ ಸನ್ನಿವೇಶ ಎಲ್ಲ ಮನೆಗಳಲ್ಲಿಯೂ ಇದೆ. 'ಡುಮ್ಮಿ ಆಂಟಿ, ಬೋಡು ಗುಂಡಾ...' ಎಂದು ಹೇಳುವ ಮಾತುಗಳು ಬಾಡಿ ಶೇಮಿಂಗ್ ಎಂಬ ಅರಿವು ಇತ್ತೀಚೆಗಷ್ಟೇ ದೊಡ್ಡವರಿಗೆ ಆಗುತ್ತಿದೆ. ಇಂತಹ ದೃಷ್ಟಿಕೋನಗಳು, ಅಸಮಾನತೆಗಳು ಬದಲಾಗಬೇಕು ಎನ್ನುವ ಆಶಯವೂ, ಅದನ್ನು ಜಾರಿಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ಚರ್ಚೆಗಳೂ ಸಮಾನಾಂತರವಾಗಿ ನಡೆಯುತ್ತಿವೆ. ನಮ್ಮ ಮುಂದಿನ ಮಕ್ಕಳು ನಾಳಿನ ಸಮಾಜದಲ್ಲಿ ಇಂತಹ ಅಸಮಾನ ದೃಷ್ಟಿಕೋನವನ್ನು ಹೊಂದದೇ ಇರಬೇಕಾದರೆ ಅವರಿಗೆ ಇಂದು ನಾವು ಹೇಳುವ ಕಥೆಗಳಲ್ಲಿ ಅಂತಹ ಅಂಶಗಳು ಸೇರದೇ ಇರುವಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಪೋಷಕರ ಮೇಲಿದೆ.

ಜೀವನ ಮೌಲ್ಯಗಳು ಬದಲಾಗುತ್ತಿರುವಾಗ ಮಕ್ಕಳಿಗೆ ಹೇಳುವ ಕತೆಗಳಲ್ಲಿಯೂ ಬದಲಾವಣೆಗಳನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಹಾಗಾದರೆ, ಕನ್ನಡದ ಸಂದರ್ಭದಲ್ಲಿ ಮಕ್ಕಳ ಕಥೆಗಳು ಈಗಿನ ಕಾಲಮಾನಕ್ಕೆ ತಕ್ಕಂತೆ ಪರಿಷ್ಕರಣೆಗೊಂಡಿವೆಯೇ ಎನ್ನುವ ಪ್ರಶ್ನೆಯನ್ನು ಮತ್ತೊಮ್ಮೆ ಕೇಳಿಕೊಳ್ಳಬೇಕಾಗುತ್ತದೆ. ಅಥವಾ ಪಂಚತಂತ್ರದ ಕಥೆಗಳನ್ನಷ್ಟೇ ಹೇಳುತ್ತ, ಅಜ್ಜಿಕಥೆಗಳು, ಈಸೋಪನ ನೀತಿಕಥೆಗಳು, ಅಕ್ಬರ ಬೀರಬಲ್ಲನ ಇಲ್ಲವೇ ತೆನ್ನಾಲಿ ರಾಮಕೃಷ್ಣನ ಕಥೆಗಳನ್ನು ಹೇಳುವುದಕ್ಕೆ ಮಕ್ಕಳ ಸಾಹಿತ್ಯಲೋಕವು ಸೀಮಿತವಾಗಿ ಉಳಿದುಬಿಟ್ಟಿದೆಯೇ ಎಂಬ ಉಪಪ್ರಶ್ನೆಗಳೂ ಕಾಡುತ್ತವೆ.

ಜಗತ್ಪ್ರಸಿದ್ಧವಾದ ಸಿಂಡ್ರೆಲಾ ಕಥೆ ನೆನಪಿದೆ ತಾನೆ? ಸುರಸುಂದರಿ ಬಾಲಕಿಯೊಬ್ಬಳು ತನ್ನ ಮಲತಾಯಿ ಮತ್ತು ಮಲಸೋದರಿಯರ ಕಾಟದಿಂದ ಬಳಲುವ ಕಥೆಯದು. ಕಥೆಯ ಕೊನೆಯಲ್ಲಿ ರಾಜಕುಮಾರನ ಪ್ರವೇಶವಾಗಿ, ಅವನು ಸಿಂಡ್ರೆಲಾಳನ್ನು ಪ್ರೀತಿಸಿ ಮದುವೆಯಾಗುವಲ್ಲಿಗೆ ಆಕೆಯ ಬಾಳಿನ ಎಲ್ಲ ಕಷ್ಟಗಳೂ ಪರಿಹಾರವಾಗಿ ಸುಖದ ಅಧ್ಯಾಯ ತೆರೆದುಕೊಳ್ಳುತ್ತದೆ. ರಾಜಕುಮಾರನು ಸಿಂಡ್ರೆಲಾಳನ್ನು ಮದುವೆಯಾಗುವ ಸಂದರ್ಭ ಸೃಷ್ಟಿಯಾಗದಂತೆಯೂ, ಮಲತಾಯಿ ಮತ್ತು ಮಲಸೋದರಿಯರು ತಡೆಯುವುದರೊಂದಿಗೆ ಕಥೆಯಲ್ಲಿ ಆಕೆಯ ಬವಣೆಯು ಇನ್ನಷ್ಟು ಹೃದಯವಿದ್ರಾವಕವಾಗಿ ಚಿತ್ರಿತವಾಗಿದೆ. ಹಾಗೆ ನೋಡಿದರೆ, ಮಲತಾಯಿ ಮತ್ತು ಮಲಸೋದರಿ ಸೋದರರ ಕಾಟದಿಂದ ನಲುಗುವ ಹೆಣ್ಣಿನ ಬಾಳಿನಲ್ಲಿ ಸ್ಫುರದ್ರೂಪಿಯಾದ, ಶ್ರೀಮಂತ ಯುವಕನೊಬ್ಬನ ಪ್ರವೇಶವಾಗುವ, ಅವನಿಂದಾಗಿ ಆಕೆಯ ಬದುಕು ನರಕದಿಂದ ಮುಕ್ತಿ ಪಡೆಯುವ ಸಾಕಷ್ಟು ಕತೆಗಳು ನಮ್ಮ ನಡುವೆ ಇವೆ. ಮಕ್ಕಳ ಕಥೆಯಷ್ಟೇ ಅಲ್ಲ, ದೊಡ್ಡವರ ಕಥೆಗಳ ಸಾಲಿನಲ್ಲಿಯೂ ಇಂತಹುದೊಂದು ಕಥೆಯ ಎಳೆಯು ಯಾಕೋ ಬಹುತೇಕರಿಗೆ ಇಷ್ಟವಾಗುವಂತಹದ್ದೇ ಆಗಿಬಿಟ್ಟಿದೆ. ಆದರೆ, ಸಿಂಡ್ರೆಲಾ ಕಥೆ ಈಗಿನ ಮಕ್ಕಳಿಗೆ ಅದರ